ಹೇಳಿದ: 'ಅಪ್ಪಾ, ಕಾರನ್ನು ಫಾಸ್ಟ್ ಓಡಿಸು. ಈ ದರಿದ್ರ ಊರಲ್ಲಿ ನೋಡುವಂತಹದ್ದು ಏನಿಲ್ಲ.' ಟೆನ್ನಿಸಿ ಊರಿಗೆ ಹೋಗುವುದು ಆ ಹುಡುಗರಿಗೆ ಬೇಕಾಗಿರಲಿಲ್ಲ ಮತ್ತು ಇಷ್ಟವೂ ಇರಲಿಲ್ಲ. ಬರೀ ಅಜ್ಜಿಗೆ ಬೇಕಾಗಿತ್ತು. ಅಜ್ಜಿಗೆ ಕೋಪ ಬರದಿರುತ್ತದೆಯೇ? "ನೋಡಿ, ನಾವು ಸಣ್ಣವರಿದ್ದಾಗ ನಮ್ಮ ಊರುಗಳ ಬಗ್ಗೆ ಕೀಳಾಗಿ ಮಾತಾಡ್ತಾ ಇರಲಿಲ್ಲ. ದೊಡ್ಡವರು ಹೇಳಿದ್ದಕ್ಕೆ ಹೂಂ ಅಂತಿದ್ದೆವು. ಎದುರುತ್ತರ ನೀಡ್ತಿರಲಿಲ್ಲ."

ಅವಳ ಮಾತಿಗೆ ಕಿವಿಗೊಡದ ಮಕ್ಕಳು ತಮ್ಮ ಕಾಮಿಕ್ಸ್ ಪುಸ್ತಕಗಳನ್ನು ಅದಲು ಬದಲು ಮಾಡಿಕೊಂಡರು. ಅಜ್ಜಿಗೆ ಏನಾದರೂ ಮಾಡುತ್ತಿರಬೇಕು. ಅದಕ್ಕಾಗಿ ಸೊಸೆಗೆ 'ಆ ಹುಡುಗನ್ನ ಸ್ವಲ್ಪ ತಾ ಇಲ್ಲಿ. ಪಾಪ, ನಿನಗೂ ಬ್ಯಾಸರ ಆಗಿರಬೇಕು.' ಎಂದು ಕೂಸನ್ನು ಇಸಿದುಕೊಂಡಳು. ಏನೂ ಮಾತಿಲ್ಲದೆ, ಸೊಗಡಿಲ್ಲದೆ, ಈ ಪ್ರವಾಸದಲ್ಲಿ ಯಾವುದೇ ಆಸಕ್ತಿ ಇರಿಸಿಕೊಂಡಿರದ ಸೊಸೆ ಭಾವನಾರಹಿತವಾಗಿ ತಿರುಗಿ ಸೀಟಿನ ಮೇಲಿಂದ ಚಿಕ್ಕ ಮಗನನ್ನು ಕೊಟ್ಟಳು. ಅಜ್ಜಿ ಅದಕ್ಕೆ ಆಗಾಗ ಮುತ್ತು ಕೊಡುತ್ತಿದ್ದಳು. ಆ ಮಗು ಯಾವಾಗಲಾದರೊಮ್ಮೆ ನಗುತ್ತಿತ್ತು. ಏನೂ ತಿಳಿಯಲಾರದ ಆ ಮಗುವಿಗೆ ಅಜ್ಜಿ ತಾವು ಹಾದುಹೋಗುತ್ತಿರುವ ಹಾದಿಯಲ್ಲಿನ ವಿಶೇಷತೆಗಳನ್ನು ಹೇಳತೊಡಗಿದಳು. ಅಷ್ಟೊತ್ತಿಗೆ ಹತ್ತಿ ಬೆಳೆದಿದ್ದ ಹೊಲವೊಂದು ಕಾಣಿಸಿತು. ಅದರೊಳಗೆ ಐದಾರು ಸಮಾಧಿಗಳು ಕಂಡವು. ಅಜ್ಜಿ ಎತ್ತರದ ಧ್ವನಿ ಮಾಡಿ ಅಂದಳು: 'ಏಯ್, ಅಲ್ಲಿ ನೋಡ್ರಿ. ಅಲ್ಲಿ ಕಾಣ್ತಾ ಇದೆಯಲ್ಲ, ಅದು ಸುಡುಗಾಡು. ಅಲ್ಲಿ ಮೊದಲು ದೊಡ್ಡ ಮರಗಳ ತೋಪು ಇತ್ತು.'

"ಆ ತೋಪು ಈಗೆಲ್ಲಿದೆ? ಕಾಣ್ತಾ ಇಲ್ಲಲ್ಲ?" ಜಾನ್ ವೆಸ್ಲೆ ಕುತೂಹಲದಿಂದ ಕೇಳಿದ.

'ಇನ್ನೆಲ್ಲಿಯ ತೋಪು, ಮರ... ಹ್ಹ... ಹ್ಹ... ಎಲ್ಲ ಹಾಳಾಗಿ ಹೋಯಿತು... ಕಾಡು ಎಲ್ಲ ಹಾಳಾಗಿ ಹೋಯಿತು...' ಅಜ್ಜಿ ನಗುತ್ತ ಅಂದಳು.

ಕಾಮಿಕ್ಸ್ ಬುಕ್‌ಗಳು ಮುಗಿದ ಮೇಲೆ ಏನು ಮಾಡುವುದೆಂದು ತಿಳಿಯದೆ ಮಕ್ಕಳು ತಮ್ಮಲ್ಲಿದ್ದ ಟಿಫಿನ್ ಬಾಕ್ಸ್ ತೆರೆದು ತಿನ್ನತೊಡಗಿದರು. ಹುರಿದ ಶೇಂಗಾ, ಬೆಣ್ಣೆ ಮುಂತಾದವುಗಳಿಂದ ಕೂಡಿದ ಸ್ಯಾಂಡ್‌ವಿಚ್‌ನ್ನು ಅಜ್ಜಿ ಕೂಡ ಬಾಯಲ್ಲಿಟ್ಟು ಚಪ್ಪರಿಸತೊಡಗಿದಳು. ಟೈಮ್‌ಪಾಸ್‌ಗಾಗಿ ಅಣ್ಣ ತಂಗಿ ಈಗ ಆಟ ಆಡತೊಡಗಿದರು. ತನ್ನ ಬೆರಳುಗಳಿಂದ ಏನೋ ಮಾಡಿ ತೋರಿಸಿದ್ದನ್ನು ಚುರುಕು ಹುಡುಗಿ ಜೂನ್ ಸ್ಟಾರ್ ಆಕಳು ಎಂದು ಸರಿಯಾಗಿ ಹೇಳಿದಳು. ಆಗ ಅವನು ಅಲ್ಲ, ನಾನು ತೋರಿಸಿದ್ದು ಒಂದು ಕಾರು ಆಗಿತ್ತು ಎಂದ. ಮೋಸ ಎಂದು ತಂಗಿ ಜಗಳಕ್ಕೆ ನಿಂತಳು. ಇಬ್ಬರೂ ಹೊಡೆದಾಡತೊಡಗಿದರು. 'ನೀವು ಸುಮ್ಮನಾದ್ರ ನಾ ನಿಮಗೊಂದ ಕತಿ ಹೇಳ್ತೀನಿ.' ಅಜ್ಜಿ ಅಂದದ್ದಕ್ಕೆ ಅವರು ಹುಸಿಮುನಿಸು ತೋರಿಸುತ್ತ ಸುಮ್ಮನಾದರು.

ಕಣ್ಣು ಮೇಲೆಕೆಳಗೆ ಮಾಡುತ್ತ, ವಾರೆನೋಟ ಬೀರುತ್ತ, ತಲೆ ಅಲ್ಲಾಡಿಸುತ್ತ, ಕೈಗಳನ್ನು ಆ ಕಡೆ ಈ ಕಡೆ ಆಡಿಸುತ್ತ ಮುದುಕಿ ಕತೆ ಹೇಳತೊಡಗಿದರೆ ನಾಟಕ ಮಾಡಿದಂತಾಗುತ್ತಿತ್ತು. ತಾನು ತರುಣಿಯಾಗಿದ್ದಾಗ ಎಡ್ಗರ್ ಅಟಕಿನ್ಸ್ ಟೀ ಎನ್ನುವವನು ತನ್ನನ್ನು ಮೆಚ್ಚಿ ಪ್ರೀತಿಸತೊಡಗಿದ್ದ. ಅವನು ನೋಡಲು ತುಂಬಾ ಚೆನ್ನಾಗಿದ್ದ. ಪ್ರತಿ ಶನಿವಾರಕ್ಕೊಮ್ಮೆ ತನ್ನ ಸಲುವಾಗಿ ಒಂದು ಕಲ್ಲಂಗಡಿ ಹಣ್ಣು ತರುತ್ತಿದ್ದ. ಅದರಲ್ಲಿ ಈ.ಏ.ಟಿ ಎಂಬ ತನ್ನ ಹೆಸರನ್ನು ಕೊರೆಸಿಕೊಂಡು ಬರುತ್ತಿದ್ದ. ಒಂದು ಸಲ ಏನಾಯಿತೆಂದರೆ ಮನೆಯಲ್ಲಿ ಯಾರೂ ಇರಲಿಲ್ಲ. ಅದಕ್ಕೆ ಮನೆಯ ಜಗಲಿಯಲ್ಲಿ ಇಟ್ಟುಹೋಗಿದ್ದ. ಅದರಲ್ಲಿ ಈಏಟಿ ಅಂದರೆ ಈಟ್ ಎಂದು ಕೊರೆದಿದ್ದನ್ನು ನೋಡಿ ದಾರಿಹೋಕನೊಬ್ಬ ತಿನ್ನಲು ಇಟ್ಟಿದ್ದಾರೆಂದು ತಿಳಿದು ತಿಂದುಬಿಟ್ಟಿದ್ದ. ಅದನ್ನು ಕೇಳಿದ ಹುಡುಗ ಬಿದ್ದುಬಿದ್ದು ನಕ್ಕರೆ ಹುಡುಗಿ ಮಾತ್ರ 'ಥೂ, ಅದರಲ್ಲಿ ನಗುವಂತಹದ್ದು ಏನಿದೆ, ತಾನು ಮಾತ್ರ ಅಂತಹ ಕಲ್ಲಂಗಡಿ ಹಣ್ಣು ತರುವವನನ್ನು ಮದುವೆಯಾಗೊಲ್ಲ' ಎಂದಳು. ಮುದುಕಿಗೆ ಇದರಿಂದ ಅವಮಾನವಾದಂತಾಯಿತು. ಮುದುಕಿ